ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 28.07.2025 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಜೆ ವಕೀಲರಿಂದಃ**

ನನಗೆ ದಾವಾ ಸ್ವತ್ತಿನ ಬಗ್ಗೆ ಅರಿವಿದೆ. ದಾವಾ ಸ್ವತ್ತಿನ ಪಶ್ಚಿಮ ಭಾಗದಲ್ಲಿ ಬೋರ್ವೆಲ್ ಮತ್ತು ಪಂಪ್ ಸೆಟ್ ಇರುತ್ತದೆ ಎಂದರೆ ಸರಿ. ಸದರಿ ಬೋರ್ ವೆಲ್ ಮತ್ತು ಪಂಪ್ ಸೆಟ್ ಗಾಗಿ ಪಡೆದುಕೊಂಡ ವಿದ್ಯುಟ್ಚಕ್ತಿ ಸಂಪರ್ಕ ಇಂದಿಗೂ ವಾದಿ ಬಸಮ್ಮನವರ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿದ್ಯಟ್ಚಕ್ತಿ ಸಂಪರ್ಕ ಇಂದಿಗೂ ವಾದಿಯ ಹೆಸರಿನಲ್ಲೇ ಇದೆಯೋ ಅಥವಾ ಇಲ್ಲವೋ ಎಂದು ತಿಳಿದುಕೊಳ್ಳಲು ನಾನು ಕೆ ಇ ಬಿ ಕಚೇರಿಗೆ ಹೋಗಿ ವಿಚಾರಿಸಿರುವುದಿಲ್ಲ. ಸದರಿ ಕೊಳವೆ ಬಾವಿ ತೆಗಯಿಸಿ ಸುಮಾರು 30 ವರ್ಷಗಳಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕೊಳವೆಬಾವಿಯು ನಾನು ಮದುವೆಯಾಗಿ ಹೋದ ಮುಂದಿನಿಂದಲೂ ಅಲ್ಲಿ ಅಸ್ತಿತ್ವದಲ್ಲಿತ್ತು, ಸದರಿ ಕೊಳವೆ ಬಾವಿಯನ್ನು ಯಾವಾಗ ತೆಗೆಸಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ.

ನನಗೆ ಕೊಳ್ಳೇಗಾಲದ ನನ್ನ ವಿಳಾಸಕ್ಕೆ ನ್ಯಾಯಾಲಯದಿಂದ ಸಮನ್ಸ್ ಜಾರಿಯಾಗಿದ್ದು, ನಾನು ಅಲ್ಲೇ ಸಮನ್ಸ್ ಅನ್ನು ಸ್ವೀಕರಿಸಿರುತ್ತೇನೆ, ಸಾಕ್ಷಿ ಮುಂದುವರಿದು ನಾನು ಕಾಳಿಹುಂಡಿ ಗ್ರಾಮದ ನಿವಾಸಿಯಿದ್ದು, ಕೊಳ್ಳೇಗಾಲದ ವಿಳಾಸವು ನನ್ನ ತವರು ಮನೆಯದ್ದು ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ತವರು ಮನೆಯ ಮನೆ ಸಂಖ್ಯೆ 7/151 ಇರುತ್ತದೆ. ಸದರಿ ಮನೆಯು ಕೊಳ್ಳೇಗಾಲ ನಗರದ ಹಳೇಕುರುಬರ ಬೀದಿಯಲ್ಲಿರುತ್ತದೆ. ನಾನು ಈ ದಾವೆಯಲ್ಲಿ ವಕೀಲರ ಮೂಲಕ ಹಾಜರಾದ ನಂತರ ವಾದಿ ಈ ದಾವೆಯಲ್ಲಿ ಸಲ್ಲಿಸಿರುವ ದಾಖಲೆಗಳನ್ನು ನೋಡಿ ಅವುಗಳ ಬಗ್ಗೆ ತಿಳಿದುಕೊಂಡಿರುತ್ತೇನೆ . ನನ್ನ ಪ್ರತಿವಾದ ಪತ್ರಕ್ಕೆ ನನ್ನ ವಕೀಲರಿಗೆ ನಾನೇ ಮಾಹಿತಿ ಕೊಟ್ಟು ತಯಾರಿಸಿರುತ್ತೇನೆ. ನಾನು ಕೊಳ್ಳೇಗಾಲದಲ್ಲಿರುವ ನನ್ನ ತವರು ಮನೆಯಲ್ಲಿದ್ದಾಗ ನ್ಯಾಯಾಲಯದಿಂದ ಬಂದ ಸಮನ್ಸ್ ಅನ್ನು ಸ್ವೀಕರಿಸಿರುವ ವಿಷಯವನ್ನು ನನ್ನ ಪ್ರತಿವಾದ ಪತ್ರದಲ್ಲಿ ಹೇಳಲು ನನಗೆ ತೊಂದರೆ ಇರಲಿಲ್ಲ.

ನನ್ನ ಮಗ ಮತ್ತು ಮಗಳು ಇಬ್ಬರೂ ವಿದ್ಯವಂತರಿರುತ್ತಾರೆ. ನನ್ನ ಮಕ್ಕಳನ್ನು ಕೊಳ್ಳೇಗಾಲದಲ್ಲಿ ನನ್ನ ತಂದೆ ತಾಯಿ ಇಬ್ಬರೂ ಸೇರಿ ಶಾಲೆಗೆ ಸೇರಿಸಿರುತ್ತಾರೆ.

ನನ್ನ ಮಕ್ಕಳ ಶಾಲಾ ದಾಖಲೆಗಳಲ್ಲಿ ನಾನೇ ಅವರನ್ನು ಶಾಲೆಗೆ ಸೇರಿಸಿರುವುದಾಗಿ ನಮೂದು ಇದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಶಾಲೆ ದಾಖಲೆಯಲ್ಲಿ ತಾಯಿಯ ಹೆಸರೇ ಅಂದರೆ ನನ್ನ ಹೆಸರೇ ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಇಬ್ಬರು ಮಕ್ಕಳನ್ನು ನಾನೇ ಶಾಲೆಗೆ ದಾಖಲಿಸಿರುತ್ತೇನೆ. ನಾನು ಹಲವಾರು ವರ್ಷಗಳಿಂದ ಕೊಳ್ಳೇಗಾಲದಲ್ಲೇ ಬಾಡಿಗೆ ಮನೆಯಲ್ಲಿ ವಾಸವಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಕಾಳಿಹುಂಡಿ ಗ್ರಾಮದಲ್ಲಿ ವಾಸವಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ಕೊಳ್ಳೇಗಾಲದ ವಿಳಾಸಕ್ಕೆ ನನ್ನ ಪಡಿತರ ಚೀಟಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಪಡಿತರ ಚೀಟಿ ಮೂಲಕ ನಾನು ಕೊಳ್ಳೇಗಾಲದಲ್ಲೇ ರೇಷನ್ ಪಡೆದುಕೊಳ್ಳುತ್ತೇನೆ. ಕೊಳ್ಳೇಗಾಲದ ಮತದಾರರ ಪಟ್ಟಿಯಲ್ಲಿ ನನ್ನ ಮತ್ತು ನನ್ನ ಗಂಡನ ಹೆಸರು ಇದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಕಾಳಿಹುಂಡಿ ಗ್ರಾಮದಲ್ಲೇ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಮತದಾರರ ಗುರುತಿನ ಚೀಟಿ ಕೊಳ್ಳೇಗಾಲದಲ್ಲೆ ಇದ್ದರೂ ಸಹ ನಾನು ಕಾಳಿಹುಂಡಿಯಲ್ಲಿ ಇದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಪತ್ರದ ಮೊದಲ ಪುಟದಲ್ಲಿ ನಮೂದು ಇರುವ ವಿಳಾಸದಲ್ಲೇ ನಾನು ವಾಸ ಇರುವುದು ಎಂದರೆ ಸರಿಯಲ್ಲ. ನನ್ನ ಪಡಿತರ ಚೀಟಿ ಮತ್ತು ಮತದಾರರ ಗುರುತಿನ ಚೀಟಿಯನ್ನು ಹಾಜರು ಮಾಡಲು ನನಗೆ ತೊಂದರೆ ಇಲ್ಲ. ನನ್ನ ಆಧಾರ ಕಾರ್ಡಿನಲ್ಲಿ ನನ್ನ ವಿಳಾಸವು ಕೊಳ್ಳೇಗಾಲ ಎಂದು ದಾಖಲು ಇದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಕಾಳಿಹುಂಡಿ ಎಂದು ನಮೂದು ಇದೆ ಎಂದು ನುಡಿಯುತ್ತಾರೆ.

ನಾನು ಹೇಗಾದರೂ ಮಾಡಿ ಕಾಳಿಹುಂಡಿಯಲ್ಲಿ ನೆಲೆಸಿರುವುದಾಗಿ ಸಾಬೀತು ಪಡಿಸಿ ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಹಾಜರು ಪಡಿಸಿರುವ ದಾಖಲೆಗಳು ಕ್ರಮವಾಗಿ ಇವೆ ಎಂದರೆ ಸರಿ . ದಾವಾ ಸ್ವತ್ತು 1967 ರಲ್ಲಿ ಚೌಡಮ್ಮ ಎನ್ನುವವರಿಗೆ ಕ್ರಯವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅವರು ದಾವಾ ಸ್ವತ್ತಿನ ಮಾಲಿಕರಾಗಿ ಸ್ವಾಧೀನಾನುಭವದಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು ದಿಃ 05.12.1974 ರಲ್ಲಿ ದಾವಾ ಸ್ವತ್ತನ್ನು ವಾದಿ ಬಸಮ್ಮನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸದರಿ ಕ್ರಯಪತ್ರದಂತೆ ಬಸಮ್ಮನವರ ಹೆಸರಿಗೆ ದಾವಾ ಸ್ವತ್ತಿನ ಖಾತೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನನ್ನ ಮಾವನಾದ ಬಸವೇಗೌಡ ಅವರ ಹೆಸರಿನಲ್ಲೇ ದಾವಾ ಸ್ವತ್ತಿನ ಖಾತೆ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಮಾವನಿಗೆ ಸದರಿ ಸ್ವತ್ತು ಅವರ ತಂದೆಯಾದ ಹುಚ್ಚೇಗೌಡರವರಿಂದ ಬಂದಿರುತ್ತದೆ. ಸದರಿ ಹುಚ್ಚೇಗೌಡ ಅವರನ್ನು ಗೆಂಡಗನ ಹುಚ್ಚೇಗೌಡ ಎಂತಲೂ ಕರೆಯುತ್ತಿದ್ದರು ಎಂದರೆ ಸರಿ. ಸದರಿ ಹುಚ್ಚೇಗೌಡ ಉ. ಗೆಂಡಗನ ಹುಚ್ಚೇಗೌಡ ಅವರ ಹೆಸರಿನಲ್ಲಿ ದಾವಾ ಸ್ವತ್ತಿನ ಖಾತೆ ಇದ್ದ ದಾಖಲೆಯನ್ನು ನಾನು ನೋಡಿರುವುದಿಲ್ಲ. ನಾನು ಊಹಿಸಿಕೊಂಡು ಸದರಿ ದಾವಾ ಸ್ವತ್ತು ಹುಚ್ಚೇಗೌಡರಿಗೆ ಸೇರಿತ್ತು ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಯಾವತ್ತೂ ಸದರಿ ಹುಚ್ಚೇಗೌಡ ಉ. ಗೆಂಡಗನ ಹುಚ್ಚೇಗೌಡರಿಗೆ ಸೇರಿರಲಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸದರಿ ಆಸ್ತಿ ನನ್ನ ಮಾವನಿಗೆ ಅವರ ತಂದೆಯಿಂದ ಬಂದಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಹುಚ್ಚೇಗೌಡರು ನನ್ನ ಮಾವನಿಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಪತ್ರ ಬರೆದುಕೊಟ್ಟಿರುವುದಿಲ್ಲ, ಸಾಕ್ಷಿ ಮುಂದುವರಿದು ಸದರಿ ಹುಚ್ಚೇಗೌಡರು ಬದುಕಿದ್ದಾಗಲೇ ನನ್ನ ಮಾವನ ಹೆಸರಿಗೆ ಅವರು ದಾವಾ ಸ್ವತ್ತಿನ ಖಾತೆಯನ್ನು ಮಾಡಿಸಿಕೊಟ್ಟಿರುತ್ತಾರೆ. ಹುಚ್ಚೇಗೌಡರು 1997 ರಲ್ಲಿ ಮೃತಪಟ್ಟಿರುತ್ತಾರೆ. ಬಸವೇಗೌಡರು 2000 ದಲ್ಲಿ ಮೃತಪಟ್ಟಿರುತ್ತಾರೆ. ನನಗೆ ಕನ್ನಡ ಭಾಷೆಯನ್ನು ಓದಲು ಬರೆಯಲು ಬರುತ್ತದೆ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲೆ ತೋರಿಸಿದ್ದು ಸದರಿ ದಾಖಲೆಯು ನಿ ಪಿ 4 ಇದ್ದು ಅದನ್ನು ಸಾಕ್ಷಿ ನೋಡಿ ಓದಿ ಸದರಿ ದಾಖಲೆಯಲ್ಲಿ ಬಸಮ್ಮ ಕೋಂ ಹುಚ್ಚೇಗೌಡ ಕ್ರಯ ಎಂದು ನಮೂದಾಗಿರುವುದಾಗಿ ಹೇಳಿರುತ್ತಾರೆ. ಸದರಿ ನಿ ಪಿ 4 ರಲ್ಲಿ ಸ.ನಂ. 176 ಮತ್ತು ವಿಸ್ತೀರ್ಣ 2 ಎಕರೆ 6 ಗುಂಟೆ ದಾಖಲಾಗಿರುವುದಾಗಿ ಸಾಕ್ಷಿ ಓದಿ ಒಪ್ಪಿಕೊಂಡಿರುತ್ತಾರೆ. ಸದರಿ ದಾಖೆಯಲ್ಲಿ ಮ್ಯುಟೇಶನ್ ಆದೇಶ ಸಂ. ಎಂ ಆರ್ ನಂ.27/1974-75 ಎಂದು ದಾಖಲಿರುವುದಾಗಿ ಸಾಕ್ಷಿ ಓದಿ ಒಪ್ಪಿಕೊಂಡಿರುತ್ತಾರೆ. ಸದರಿ ದಾವಾ ಸ್ವತ್ತು ವಾದಿ ಬಸಮ್ಮ ಕೋಂ ಹುಚ್ಚೇಗೌಡರಿಗೆ ಕ್ರಯವಾಗಿರುವ ವಿಷಯ ನನ್ನ ತಿಳುವಳಿಕೆಯಲ್ಲಿದ್ದರೂ ಸಹ ನಾನು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮ್ಯುಟೇಶನ್ ಆದೇಶವು ಯಾವುದೇ ನ್ಯಾಯಾಲಯದಲ್ಲಿ ರದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ಬಸಮ್ಮನವರಿಗಾದ ನೋಂದಾಯಿತ ಕ್ರಯಪತ್ರವೂ ಕೂಡಾ ಎಲ್ಲಿಯೂ ರದ್ದಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಹುಚ್ಚೇಗೌಡ ಮತ್ತು ಬಸಮ್ಮ ದಂಪತಿಗಳಿಗೆ ಬಸವೇಗೌಡ ಮತ್ತು ಮಾದೇಗೌಡ ಎಂದು ಇಬ್ಬರು ಮಕ್ಕಳಿದ್ದು ಅವರಿಬ್ಬರೂ ಈಗ ಮೃತಪಟ್ಟಿರುತ್ತಾರೆ ಎಂದರೆ ಸರಿ. ನಾನು ಹೇಳುವಂತೆ ಹುಚ್ಚೇಗೌಡರು ಯಾವತ್ತೂ ನನ್ನ ಮಾವನಿಗೆ ದಾವಾ ಸ್ವತ್ತಿನ ಖಾತೆಯನ್ನು ಮಾಡಿಸಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿ ಪಿ 7 ರಲ್ಲಿ ಕಂಡುಬರುವಂತೆ ದಾವಾ ಸ್ವತ್ತನ್ನು ಬಸವೇಗೌಡ ಬಿನ್ ಹುಚ್ಚೇಗೌಡ ಕ್ರಯ ಎಂದು ನಮೂದು ಇದೆ ಎಂದರೆ ಸರಿ. ಯಾವುದೇ ಕಂದಾಯ ದಾಖಲೆಗಳಲ್ಲಿ ಬಸವೇಗೌಡರ ಹೆಸರಿಗೆ ಮ್ಯುಟೇಶನ್ ಆದೇಶ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಬಸವೇಗೌಡರಿಗೆ ದಾವಾ ಸ್ವತ್ತಿನ ಖಾತೆಯಾದ ಮ್ಯುಟೇಶನ್ ಆದೇಶದ ಬಗ್ಗೆ ನನಗೆ ಗೊತ್ತಿಲ್ಲ. ಬಸವೇಗೌಡ ಮತ್ತು ಮಾದೇಗೌಡ ಇಬ್ಬರೂ ಮೃತಪಟ್ಟ ನಂತರ ಬಸವೇಗೌಡರ ಹೆಂಡತಿಯಾದ ಸಣ್ಣಾಜಮ್ಮನವರು ಮಾದೇಗೌಡರ ಪತ್ನಿಯಾದ ರಾಜಮ್ಮ ಮತ್ತು ಅವರ ಮಕ್ಕಳ ವಿರುದ್ಧ ಅಸಲು ದಾವೆ ಸಂ. 76/2006 ಎಂದು ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಕೂಡಾ ಪಕ್ಷಗಾರಳು ಇರುತ್ತೇನೆ ಎಂದರೆ ಸರಿ. ಆ ದಾವೆಯನ್ನು ನನ್ನ ಅತ್ತೆಯಾದ ಸಣ್ಣಾಜಮ್ಮನವರು ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯು 11 ಜಮೀನುಗಳನ್ನು ಒಳಗೊಂಡಂತೆ ಹೂಡಲಾಗಿತ್ತು ಎಂದರೆ ಸರಿ. ಸದರಿ ದಾವೆಯ ವಾದಪತ್ರದಲ್ಲಿರುವ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ದಿಃ22.02.2011ರಲ್ಲಿ ಸದರಿ ದಾವೆಯಲ್ಲಿ ಮೊದಲ ಡಿಕ್ರಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಶ್ರೀ ಬಿ ಎಂ ನಾಗಭೂಷಣ ಮೂರ್ತಿಯವರು ನನ್ನ ಪರ ವಕೀಲರಾಗಿದ್ದರು. ಆ ದಾವೆ ಮತ್ತು ಡಿಕ್ರಿಯಲ್ಲಿ ಈ ದಾವಾ ಸ್ವತ್ತು ಸೇರ್ಪಡೆಯಾಗಿರುವುದಿಲ್ಲ ಎಂದರೆ ಸರಿ . ದಾವಾ ಸ್ವತ್ತು ಬಸಮ್ಮನವರ ಸ್ವಯಾರ್ಜಿತ ಆಸ್ತಿ ಇರುವ ಕಾರಣ ಸದರಿ ಸ್ವತ್ತನ್ನು ಒ ಎಸ್ ನಂ. 76/2006 ರಲ್ಲಿ ಸೇ ರಿಸಿರುವುದಿಲ್ಲ ಎಂದರೆ ಸರಿ. ಸದರಿ ಡಿಕ್ರಿಯಂತೆ ಪ್ರಸ್ತುತ ಅಂತಿಮ ಡಿಕ್ರಿ ಪ್ರಕರಣ 3/2017 ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನ್ಯಾಯಾಲಯದ ನಿಯೋಗಿಗಳು ವರದಿ ಸಲ್ಲಿಸಿ ನಮ್ಮ ನಮ್ಮ ಹಿಸ್ಸೆಯನ್ನು ಗುರುತಿಸಿರುತ್ತಾರೆ ಎಂದರೆ ಸರಿ. ಸದರಿ ಎಫ್ ಡಿ ಪಿ ಪ್ರಕರಣದಲ್ಲೂ ಕೂಡಾ ಶ್ರೀ ಬಿ ಎಂ ನಾಗಭೂಷಣ ಮೂರ್ತಿಯವರೇ ನನ್ನ ಪರ ವಕೀಲರು ಇರುತ್ತಾರೆ ಎಂದರೆ ಸರಿ. ಬಸಮ್ಮನವರ ಆಸ್ತಿಯನ್ನು ಹೇಗಾದರೂ ಮಾಡಿ ಲಪಟಾಯಿಸುವ ಉದ್ದೇಶದಿಂದ ನಾನು ನಿ ಪಿ 7ರಲ್ಲಿ ಬಸವೇಗೌಡ ಬಿನ್ ಹುಚ್ಚೇಗೌಡರಿಗೆ ಕ್ರಯ ಎಂದು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮೂಲವಾದಿ ಬಸಮ್ಮನವರು ಬದುಕಿದ್ದಾಗ ಅವರೇ ದಾವಾ ಸ್ವತ್ತಿನಲ್ಲಿ ಬೆಳೆ ಬೆಳೆಯುತ್ತಿದ್ದರು ಎಂದರೆ ಸಾಕ್ಷಿಯು ನಾವೇ ಬೆಳೆಯುತ್ತಿದ್ದೆವು ಎಂದು ನುಡಿಯುತ್ತಾರೆ. ನನಗಾಗಲೀ ಅಥವಾ ನನ್ನ ಗಂಡನಿಗಾಗಲೀ ಬಸಮ್ಮನವರು ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ನೋಂದಾಯಿತ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ.

ನನ್ನ ಗಂಡ ಮತ್ತು ನನ್ನ ಹೆಸರಿಗೆ ದಾವಾ ಸ್ವತ್ತಿನ ಖಾತೆ ಮಾಡಿಸಿಕೊಳ್ಳುವ ಪೂರ್ವದಲ್ಲಿ ಬಸಮ್ಮನವರ ಹೆಸರಿಗೆ ಖಾತೆಯಾಗಿರುವುದನ್ನು ನಾವು ಕಂದಾಯ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ. ನನ್ನ ಹೆಸರಿಗೆ ಖಾತೆ ಯಾದಾಗ ಕೂಡಾ ನಾನು ಬಸಮ್ಮನವರಿಗೆ ಯಾವುದೇ ನೋಟಿಸು ಕೊಟ್ಟಿಲ್ಲ. ನನ್ನ ಗಂಡ ಬದುಕಿದ್ದಾಗ ಅವರು ಮತ್ತು ಅವರು ಮೃತಪಟ್ಟ ನಂತರ ನಾನು, ಇಬ್ಬರೂ ಕೂಡಾ ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ಸುಳ್ಳು ಖಾತೆ ವರ್ಗಾವಣೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಹೆಸರಿಗೆ ಖಾತೆ ಆಗಿರುವುದನ್ನು ಪ್ರಶ್ನಿಸಿ ಬಸಮ್ಮನವರು ಸಹಾಯಕ ಕಮೀಷನರ್ ಅವರ ನ್ಯಾಯಾಲಯದಲ್ಲಿ ತಹಶೀಲ್ದಾರವರ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಸಹಾಯಕ ಕಮೀಷನರ್ ರವರು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿ ನಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವಂತೆ ಆದೇಶಿಸಿರುತ್ತಾರೆ ಎಂದರೆ ಸರಿ.

ಒ ಎಸ್ 76/2006 ಅನ್ನು ಹೊರತುಪಡಿಸಿ ನನ್ನ ಅತ್ತೆಯಾದ ಸಣ್ಣಾಜಮ್ಮನವರು ಬೇರೆ ಯಾವುದೇ ದಾವೆಯನ್ನು ಹೂಡಿರುವುದಿಲ್ಲ. ಒ ಎಸ್ ಸಂ.2/2006 ಎಂದು ನಾವು ಯಾವುದೇ ದಾವೆಯನ್ನು ಯಾವುದೇ ನ್ಯಾಯಾಲಯದಲ್ಲಿ ದಾಖಲಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಬಸಮ್ಮನವರು ಕೂಡಾ ಒ ಎಸ್ 2/2006 ಎಂದು ಯಾವುದೇ ದಾವೆಯನ್ನು ಯಾವುದೇ ನ್ಯಾಯಾಲಯದಲ್ಲಿ ಹೂಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಸಹಾಯಕ ಕಮೀಷನರ್ ರವರ ನ್ಯಾಯಾಲಯದಲ್ಲಿ ವಾದಿಯ ವಿರುದ್ಧ ಸಣ್ಣಾಜಮ್ಮನವರು ಒ ಎಸ್ 2/2006 ಎಂದು ದಾವೆ ಹೂಡಿದ್ದರು ಎಂದು ನನ್ನ ತಕರಾರಿನಲ್ಲಿ ಸುಳ್ಳು ಬರೆಸಿ ಸದರಿ ಮೇಲ್ಮನವಿಯನ್ನು ವಜಾಗೊಳಿಸಿರುತ್ತೇನೆ ಎಂದರೆ ಸರಿಯಲ್ಲ. ನಾವು ವಾದಿಯನ್ನು ರಾಜಿ ಮಾಡಿಕೊಳ್ಳಲು ಕರೆಯಿಸಿ ನಂತರ ಅವರೊಂದಿಗೆ ಒರಟಾಗಿ ನಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಇದೇ ನ್ಯಾಯಾಲಯದಲ್ಲಿ ವಾದಿ ಬಸಮ್ಮನವರ ವಿರುದ್ಧ ಒ ಎಸ್ 5/2006 ಎಂದು ದಾವೆ ಹೂಡಿದ್ದೆ ಎಂದರೆ ಸರಿ.

ಸದರಿ ದಾವಾ ಸ್ವತ್ತಿನ ಮೇಲೆ ನಮಗೆ ಹಕ್ಕು ಸ್ವಾಧೀನ ಇಲ್ಲದ ಕಾರಣ ನಾನು ನ್ಯಾಯಾಲಯಕ್ಕೆ ಹಾಜರಾಗುತ್ತಿರಲಿಲ್ಲ ಎಂದು ಸದರಿ ದಾವೆಯಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ. ಹಾಗಾಗಿ ಸದರಿ ದಾವೆ ವಜಾಗೊಂಡಿರುತ್ತದೆ ಎಂದರೆ ಸರಿಯಲ್ಲ.

ಬಸಮ್ಮನವರು ಬದುಕಿದ್ದಾಗ ಅವರು ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಅವರಿಗೆ ಹುಷಾರಿರಲಿಲ್ಲ ಎಂದು ನುಡಿಯುತ್ತಾರೆ. ಅವರು ಬಿದ್ದು ಅವರ ನಡುವಿನ ಕೆಳಭಾಗದಲ್ಲಿ ಏಟಾಗಿದ್ದು ಅವರು ಕುಂಟುತ್ತಾ ನಡೆಯುತ್ತಿದ್ದರು ಎಂದರೆ ಸರಿ. ಅವರು ತಮ್ಮ ಕೆಲಸಕ್ಕೆ ಆಳುಕಾಳುಗಳನ್ನು ನೇಮಿಸಿಕೊಂಡಿರಲಿಲ್ಲ ಎಂದರೆ ಸಾಕ್ಷಿಯು ನಾವೇ ಅವರನ್ನು ನೋಡಿಕೊಳ್ಳುತ್ತಿದ್ದೆವು ಎಂದು ನುಡಿಯುತ್ತಾರೆ. ಬಸವಮ್ಮನವರನ್ನು ನಾನು ಯಾವತ್ತೂ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಿಲ್ಲ, ಸಾಕ್ಷಿ ಮುಂದುವರಿದು ನನ್ನ ಚಿಕ್ಕ ಅತ್ತೆಯಾದ ರಾಜಮ್ಮನವರೇ ಬಸಮ್ಮನವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಮತ್ತು ರಾಜಮ್ಮನವರು ಅನ್ಯೋನ್ಯದಿಂದ ಇದ್ದೇವೆ ಎಂದರೆ ಸರಿ. ಬಸಮ್ಮನವರನ್ನು ಆಸ್ಪತ್ರೆ ಗೆ ದಾಖಲಿಸಿರುವ ಬಗ್ಗೆ ಮತ್ತು ವೈದ್ಯರಿಂದ ತಪಾಸಣೆಗೊಳಪಡಿಸಿದ ಬಗ್ಗೆ ದಾಖಲೆಗಳು ರಾಜಮ್ಮನ ಬಳಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾಖಲೆಗಳನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇರುವುದಿಲ್ಲ. ಬಸಮ್ಮನವರು ಮರಣ ಹೊಂದುವಾಗ ಅವರಿಗೆ 80 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಅವರ ನಡುವಿನ ಕೆಳಭಾಗದಲ್ಲಾದ ನೋವು ಮತ್ತು ಅವರಿಗೆ ವಯಸ್ಸಾದ ಕಾರಣ ಅವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ನ್ಯಾಯಾಲಯದಲ್ಲಿ ಈ ದಿನ ಉಪಸ್ಥಿತರಿರುವ ಶ್ರೀಮತಿ ನಾಗರತ್ನಮ್ಮ ಅವರು ನನ್ನ ಗಂಡನ ಅಕ್ಕ ಇರುತ್ತಾರೆ ಎಂದರೆ ಸರಿ. ಸಣ್ಣಣಜಮ್ಮ ಬದುಕಿದ್ದಾಗ ಅವರು ಶಾಶ್ವತವಾಗಿ ಕಾಳಿಹುಂಡಿ ಯಲ್ಲಿ ವಾಸವಿದ್ದರು ಎಂದರೆ ಸರಿ. ಸಣ್ಣಣಜಮ್ಮ ಮತ್ತು ಬಸಮ್ಮನವರು ಒಂದೇ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ.

ನಿ ಪಿ 12 ರಲ್ಲಿ ಕಂಡು ಬರುವ ಛಾಯಾಚಿತ್ರವು ಬಸಮ್ಮನವರದ್ದು ಇರುತ್ತದೆ ಎಂದರೆ ಸರಿ. ಬಸವಮ್ಮನವರಿಗೆ ವಯಸ್ಸಾದ ಕಾರಣ ಅವರ ಯೋಗಕ್ಷೇಮವನ್ನು ಸಣ್ಣನಂಜಮ್ಮ ಮತ್ತು ಅವರ ಮಗಳಾದ ನಾಗರತ್ನಮ್ಮ ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ನಾವು ಕೂಡಾ ಅದೇ ಮನೆಯಲ್ಲಿದ್ದು ನಾವು ಕೂಡಾ ನೋಡಿಕೊಳ್ಳುತ್ತಿದ್ದೆವು ಎಂದು ನುಡಿಯುತ್ತಾರೆ. ನಿ ಪಿ 12 ರಲ್ಲಿ ಇರುವ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿ ಪಿ 12 ರಂತೆ ಬಸಮ್ಮನವರು ತನ್ನ

ಮೊಮ್ಮಗಳಾದ ನಾಗರತ್ನಮ್ಮನವರಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನೋಂದಾಯಿತ ಮರಣ ಶಾಸನ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾ ಕ್ಷಿಯು ಮೊದಲು ನನಗೆ ಗೊತ್ತಿರಲಿಲ್ಲ, ನ್ಯಾಯಾಲಯಕ್ಕೆ ಬಂದ ನಂತರ ಸದರಿ ದಾಖಲೆಯನ್ನು ಬರೆದುಕೊಟ್ಟಿರುವ ಬಗ್ಗೆ ನನಗೆ ಗೊತ್ತಾಯಿತು ಎಂದು ನುಡಿಯುತ್ತಾರೆ. ಸದರಿ ಮರಣಶಾಸನ ಪತ್ರವನ್ನು ರದ್ದುಗೊಳಿಸುವಂತೆ ನಾನು ಯಾವುದೇ ದಾವೆ ಹೂಡಿರುವುದಿಲ್ಲ. ಬಸಮ್ಮನವರು ದಿಃ22.04.2019 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಟಿ.ನರಸೀಪುರದ,ವಿವೇಕಾನಂದ ನಗರದಲ್ಲಿ ಸದರಿ ನಾಗರತ್ನಮ್ಮನವರ ಸ್ವಂತ ಮನೆಯಿರುತ್ತದೆ ಎಂದರೆ ಸರಿ. ಬಸಮ್ಮನವರು ನಾಗರತ್ನಮ್ಮನವರ ಮನೆಯಲ್ಲೇ ಮೃತಪಟ್ಟರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಅವರು ಕಾಳಿಹುಂಡಿ ಗ್ರಾಮದಲ್ಲೇ ಮೃತಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಕಾಳಿಹುಂಡಿ ಗ್ರಾಮದಲ್ಲಿ ಬಸಮ್ಮ ಮೃತಪಟ್ಟಿರುವುದಾಗಿ ತೋರಿಸಲು ನನ್ನ ಬಳಿ ದಾಖಲೆಗಳು ಇಲ್ಲ. ನಾನು ಕಾಳಿಹುಂಡಿ ಗ್ರಾಮದಲ್ಲಿ ಬಸಮ್ಮನವರ ಮರಣ ನೋಂದಣಿಯಾದ ಬಗ್ಗೆ ತಿಳಿದುಕೊಂಡಿರುವುದಿಲ್ಲ. ನಾನು ಕೂಡಾ ಅವರ ಮರಣಪ್ರಮಾಣಪತ್ರವನ್ನು ಪಡೆದುಕೊಂಡಿರುವುದಿಲ್ಲ. ಉಯಿಲು ಪತ್ರದ ಆಧಾರದ ಮೇಲೆ ಸದರಿ ನಾಗರತ್ನಮ್ಮನವರಿಗೆ ದಾವಾ ಸ್ವತ್ತಿನ ಮಾಲಿಕತ್ವ ಹಸ್ತಾಂತರವಾಗಿದ್ದು ಸದರಿ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಸರಿಗೆ ಖಾತೆಯಾಗುವ ಸಂದರ್ಭದಲ್ಲಿ ಬಸಮ್ಮನವರು ಬರೆದ ಯಾವುದೇ ಲಿಖಿತ ಹೇಳಿಕೆಗಳು ನನ್ನ ಬಳಿ ಇರುವುದಿಲ್ಲ. ಬಸಮ್ಮನವರು ಮೃತಪಟ್ಟಾಗ ಅವರ ಶವಸಂಸ್ಕಾರವನ್ನು ಸಣ್ಣ ನಂಜಮ್ಮ ಮತ್ತು ನಾಗರತ್ನಮ್ಮ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಸಣ್ಣನಂಜಮ್ಮನವರು ಬಸಮ್ಮನವರ ಪೂರ್ವದಲ್ಲೇ ಮೃತಪಟ್ಟಿರುತ್ತಾರೆ ಮತ್ತು ಸದರಿ ಬಸಮ್ಮನವರ ಶವಸಂಸ್ಕಾರವನ್ನು ರಾಜಮ್ಮನವರು ಮತ್ತು ನಾವು ಸೇರಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವಂತೆ ಬಸವೇಗೌಡ ಮತ್ತು ಮಾದೇಗೌಡ ಅವರ ನಡುವೆ ಯಾವುದೇ ಲಿಖಿತ ವಿಭಾಗ ಪತ್ರ ಆಗಿರುವುದಿಲ್ಲ, ಸಾಕ್ಷಿ ಮುಂದುವರಿದು ಅವರು ಮೌಖಿಕವಾಗಿ ತಮ್ಮ ನಡುವೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಸದರಿ ಮೌಖಿಕ ವಿಭಾಗದಂತೆ ಯಾವುದೇ ಮ್ಯುಟೇಶನನ್ ಆದೇಶ ವಾಗಿರುವುದಿಲ್ಲ ಮತ್ತು ಅದರಂತೆ ಬಸವೇಗೌಡ ಮತ್ತು ಮಾದೇಗೌಡ ಅವರಿಗೆ ತಮ್ಮ ನಡುವೆ ಹಂಚಿಕೆ ಆದ ಆಸ್ತಿಗಳ ಹಿಸ್ಸೆಯ ಪ್ರತ್ಯೇಕ ಖಾತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಒ ಎಸ್ 76/2006 ನಾವೆಲ್ಲರೂ ಜಂಟಿಯಾಗಿ ಹಾಕಿದ ದಾವೆಯಿರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ನಾನು ಹಾಕಿರುವುದಿಲ್ಲ, ನಾಗರತ್ನಮ್ಮನವರೇ ಹಾಕಿಸಿರುತ್ತಾರೆ ಎಂದು ನುಡಿಯುತ್ತಾರೆ. ಕಾಳಿಹುಂಡಿ ಗ್ರಾಮದ ಸ.ನಂ.32/5ರಲ್ಲಿ 37 ಗುಂಟೆ ಬಸಮ್ಮನವರಿಗೆ ಜೀವನಾಂಶಕ್ಕಾಗಿ ಬಿಟ್ಟುಕೊಟ್ಟ ಬಗ್ಗೆ ನನ್ನ ಬಳಿ ಲಿಖಿತ ದಾಖಲೆ ಇರುತ್ತದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇರುವುದಿಲ್ಲ. ಸದರಿ ಸ.ನಂ. 32/5ರ ಆಸ್ತಿಯು ಬಸಮ್ಮನವರು ಖರೀದಿಸಿದ ಆಸ್ತಿಯಿದ್ದು ಅದನ್ನು ಅವರು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ವಾದಿಯು ನನಗೆ ತೊಂದರೆ ಕೊಟ್ಟಾಗ ನಾನು ಪೊಲೀಸರಿಗೆ ದೂರು ಕೊಟ್ಟಿರುತ್ತೇನೆ ಎಂದು ನಾನು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವಂತೆ ನಾನು ಪೊಲೀಸರಿಗ ಕೊಟ್ಟ ದೂರಿನ ಪ್ರತಿ ಮತ್ತು ಪೊಲೀಸರು ದಾಖಲಿಸಿಕೊಂಡ ಪ್ರಕರಣದ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಉಯಿಲು ಪತ್ರದ ಆಧಾರದಂತೆ ದಾವಾ ಸ್ವತ್ತಿನ ಮಾಲಿಕತ್ವ ಮತ್ತು ಸ್ವಾಧೀನವನ್ನು ನಾಗರತ್ನಮ್ಮನವರು ಹೊಂದಿರುತ್ತಾರೆ ಎಂದರೆ ಸರಿಯಲ್ಲ.

ನಿ ಡಿ 2 ರಿಂದ 4 ಕ್ಕೂ ದಾವಾ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿ ಡಿ 8 ಮತ್ತು 9 ಕ್ಕೂ ದಾವಾ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಭತ್ತ ಮತ್ತು ಕಬ್ಬು ಬೆಳೆ ಇರುತ್ತದೆ. ದಾವಾ ಸ್ವತ್ತು ಕೃಷಿ ಜಮೀನಾಗಿದ್ದು, ನಾಲೆ ಕೂಡಾ ಇರುತ್ತದೆ. ನಿ ಪಿ 11 ರ ಪಕ್ಕದ ಜಮೀನಿನಲ್ಲಿ ಬೆಳೆ ಬೆಳೆಯದೇ ಪಾಳು ಬಿದ್ದಿದೆ ಎಂದರೆ ಸರಿ. ಸದರಿ ಪಾಳು ಜಮೀನಿನಲ್ಲಿ ಒಂದು ಮನೆ ಇದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಾವು ಬೆಳೆ ಬೆಳೆ ಯುತ್ತಿಲ್ಲ ನಾಗರತ್ನಮ್ಮನವರೇ ಸ್ವಾಧೀನದಲ್ಲಿದ್ದು ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳಿಗೂ ದಾವಾ ಸ್ವತ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಹಿಂದೆ ಬಸಮ್ಮನವರು ದಾವಾ ಸ್ವತ್ತಿನ ಮಾಲಿಕರು ಮತ್ತು ಸ್ವಾಧೀನಾನುಭವದಲ್ಲಿದ್ದು ಅದರಂತೆ ಬಸಮ್ಮನವರು ದಾವಾ ಸ್ವತ್ತಿನ ಸಂಪೂರ್ಣ ಮಾಲಿಕರಾದ ಕಾರಣ ಅವರು ಅದನ್ನು ತಮ್ಮ ಜೀವಿತ ಕಾಲದಲ್ಲಿ ಅವರು ನೊಂದಾಯಿತ ಉಯಿಲು ಪತ್ರ ಬರೆದುಕೊಟ್ಟು ನಾಗರತ್ನಮ್ಮನವರಿಗೆ

ಹಸ್ತಾಂತರಿಸಿದ್ದು, ಬಸಮ್ಮನವರ ಮರಣದ ನಂತರ ನಾಗರತ್ನಮ್ಮನವರು ನೊಂದಾಯಿತ ಉಯಿಲು ಪತ್ರದ ಆಧಾರದ ಮೇಲೆ ದಾವಾ ಸ್ವತ್ತಿನ ಮಾಲಿಕರು ಮತ್ತು ಸ್ವಾಧೀನದಾರರು ಆಗಿರುತ್ತಾರೆ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ದಾವಾ ಸ್ವತ್ತನ್ನ ಲಪಟಾಯಿಸಬೇಕೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓದಿ ಹೇಳಿ ಕೇಳಿ ಸರಿಯಾಗಿದೆ.**

(ಸಚಿನ್ ಹೆಚ್.ಆರ್)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ .ಎಂ .ಎಫ್ .ಸಿ ., ತಿ .ನರಸೀಪುರ